**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ.**

**ಸಿಸಿ ನಂ.126/2019**

**ಫಿರ್ಯಾದಿಃ** ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ ಠಾಣೆ.

**-ಃಃ ವಿರುದ್ದ ಃಃ-**

**ಆರೋಪಿ/ತರುಃ** **ಎ3.** ಪ್ರಶಾಂತ ತಂದೆ ಮಲ್ಲಪ್ಪ ಕೊನ್ನಳ್ಳಿ,
ವಃ 28 ವರ್ಷ, ಉಃ ಜೆಸಿಬಿ ಆಪರೇಟರ್,
ಸಾಃ ಮಣ್ಣೂರ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

**ದೋಷಾರೋಪಣೆ**

ನಾನು ಶ್ರೀ ಅನಿಲ ಅಮಾತೆ., ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

ದಿನಾಂಕ 27.05.2018 ರಂದು ಬೆಳಿಗ್ಗೆ 11-20 ಗಂಟೆ ಸುಮಾರಿಗೆ ಅಫಜಲಪೂರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಮಣ್ಣೂರ ಗ್ರಾಮ ಸಿಮಾಂತರದ ಹೊಲ ಸರ್ವೆ ನಂ.24/2/2 ನೇದ್ದರ ಹೊಲದಲ್ಲಿ ಒಪ್ಪಂದ ಮಾಡಿಕೊಂಡು 3ನೇ ಆರೋಪಿಯಾದ ನೀವು 4ನೇ ಆರೋಪಿತನ ಬಾಬು ಕೆಎ-32-ಡಿ-0969 ನೇದ್ದರ ಜೆಸಿಬಿ ಸಹಾಯದಿಂದ ಸರ್ವೆ ನಂ.24/2/2 ರ ಹೊಲದಲ್ಲಿ 660.30 ಘನ ಮೀಟರ ಮರಳನ್ನು 2ನೇ ಆರೋಪಿತನ ಬಾಬ್ತು ಕೆಎ-32-ಡಿ-3193 ನೇದ್ದರ ಟಿಪ್ಪರನಲ್ಲಿ ಭೀಮಾನದಿಯಿಂದ ಕಳ್ಳತನದಿಂದ ಯಾವುದೇ ಪರವಾನಿಗೆ ಇಲ್ಲದೆ ಹಾಗೂ ರಾಜ್ಯ ಸರಕಾರಕ್ಕೆ ರಾಜ್ಯ ಧನ ಕಟ್ಟದೆ ಮರಳು ಸಂಗ್ರಹ ಮಾಡಿದ್ದು, ಆ ಮೂಲಕ 3ನೇ ಆರೋಪಿತನಾದ ನೀವು ಭಾ.ದಂ.ಸಂ.ಕಲಂ. 379 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀಯಾ.

ಕಾರಣ ಮೇಲೆ ಹೇಳಿದ ಅಪರಾಧಕ್ಕಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಪ್ರಃ-1) ಮೇಲ್ಕಾಣಿಸಿದ ದೋಷಾರೋಪಣೆಯನ್ನು ಓದಿ ಹೇಳಿ ತಿಳಿಸಿದ್ದನ್ನು ಅರ್ಥಮಾಡಿಕೊಂಡಿದ್ದೀರಾ?

ಉಃ ಆ-3

ಪ್ರಃ-2)	ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತೀಯೋ ಅಥವಾ ವಿಚಾರಣೆ ನಡೆಯಬೇಕಾ?

ಉಃ	ಆ-3

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕಃ 22.01.2026	ಪ್ರ.ದ.ನ್ಯಾ.ದಂ. ಅಫಜಲಪೂರ